ಒಂದನೇ ತರಗತಿಯು ಶುರುವಾಗುತ್ತಿದ್ದಂತೆ, ಇಪ್ಪತ್ತಮೂರು ಕಿಲೋ ಮೀಟರ್ ದೂರದ ಸೋಮನಹಳ್ಳಿಗೆ, ಸ್ಥಳಾಂತರಗೊಂಡಿತು. ಆ ಶಾಲೆಯ ಬಸ್ ಮನೆ ಸಮೀಪ ಬರುವುದು. ಹತ್ತಿಸಿದರೆ ಮುಗಿಯಿತು. ಚಿಕ್ಕವಳ ಶಾಲೆ ಇದರ ವಿರುದ್ಧ ದಿಕ್ಕು. ಈ ಎರಡು ಹಕ್ಕಿಗಳು ಗೂಡು ಬಿಟ್ಟ ನಂತರ, ನಾನು ನೆಮ್ಮದಿಯಾಗಿ, ಒಂದು ಲೋಟ ಕಾಫಿ ಸವಿಯುವ ಕ್ರಮ ರೂಢಿಸಿಕೊಂಡೆ. ತಮಾಷೆಗಾಗಿ ಹೇಳುತ್ತಿದ್ದೆ. 'ಒಬ್ಬಳನ್ನ ಆಕ್ಸಫರ್ಡ್‌ಗೆ, ಒಬ್ಬಳನ್ನ ಕೇಂಬ್ರಿಡ್ಜ್‌ಗೆ ಕಳಿಸಾಯಿತು'. ಮುಂದಿನ ದಿನಗಳಲ್ಲಿ ಮಗಳು ಜಾಣೆಯಾಗತೊಡಗಿದಳು. ಆದರೂ ಟೆಸ್ಟ್, ಪರೀಕ್ಷೆಗಳಲ್ಲಿ ತೆಗೆಯುತ್ತಿದ್ದ ಗ್ರೇಡ್ ಮಾತ್ರ 'ಸಿ'. ಪ್ರತಿಬಾರಿಯು ಅವಳು ಅಪ್ಪನ ಬಳಿ ಅಂಕಪಟ್ಟಿಗೆ ಸಹಿಗೆ ತರುವಾಗ, ಬೆದರಿ, ಊರಲ್ಲಿರುವ ದೇವರ ಮೇಲೆಲ್ಲ ಪ್ರಮಾಣ ಮಾಡಿ, ಮರುಬಾರಿ 'ಎ ಗ್ರೇಡ್' ಖಂಡಿತ ತೆಗೆಯುವುದಾಗಿ ಭರವಸೆ ನೀಡುವಳು. ಆದರೆ, ಅದು ಶಾಲಾ ಹಂತ ಮುಗಿಸುವವರೆಗೂ ಹೆಚ್ಚುಕಮ್ಮಿ ಈಡೇರಲೇ ಇಲ್ಲವೆನ್ನಬಹುದು. ಇಂತಹ ಒಂದು ಸಮಯದಲ್ಲಿ, ಶಾಲೆಯವರು ಪೋಷಕರ ಸಭೆ ಕರೆದು, ಆಮಂತ್ರಣದ ಚೀಟಿ ಕಳಿಸಿದರು. ಶಾಲೆಯವರೇ ನಮ್ಮನ್ನು ಕರೆದೊಯ್ಯುವ, ಮರಳಿ ಕರೆತರುವ ವ್ಯವಸ್ಥೆಯನ್ನು ಸಹ ಮಾಡಿದ್ದರು. ಜಗತ್ತಿನ ಎಲ್ಲ ಅಮ್ಮಂದಿರಂತೆ, ನಾನು ಒಬ್ಬಳೇ ಈ ಸಂದರ್ಭ ಪ್ರತಿನಿಧಿಸಲು ಹೋದೆ. ಆ ಶಾಲೆಯಲ್ಲಿ ಸುಮಾರು ಮಕ್ಕಳ ಅಮ್ಮಂದಿರು, ಅಪರೂಪಕ್ಕೆ ಬಂದ ಅಪ್ಪಂದಿರು ನನ್ನ ಮಗುವನ್ನು ಕಂಡು ಮಾತನಾಡಿಸುವವರೇ. ಶಿಕ್ಷಕಿಯರು ಹಾಗೆ. ನನ್ನ ಸರದಿ ಬಂದಾಗ, ನನಗೋ ರಾಜಮರ್ಯಾದೆ. ಬಹುಶಃ ಮೊದಲ ಸ್ಥಾನ ಗಳಿಸುವ ಮಗುವಿನ ಮಾತಾಪಿತೃಗಳಿಗೂ ತೋರಲಾಗದ ಆದರ, ನನಗೆ ಆ ಶಿಕ್ಷಕವೃಂದದಿಂದ ಸಂದಿತು. ನನಗೋ ಅಚ್ಚರಿ. ನನ್ನ ಮಗಳ 'ಸಿ' ಗ್ರೇಡ್ ನನ್ನ ಮುಂದೆ ನೃತ್ಯವಾಡಲಾರಂಭಿಸಿತು. ಎಲ್ಲ ವಿಷಯದ ಅಂಕಗಳು, ಇಂಗ್ಲಿಷ್ ಬಿಟ್ಟು, ಹೇಳಿಕೊಳ್ಳುವ ಹಾಗೇನು ಆ ಅಂಕಪಟ್ಟಿಯಲ್ಲಿ ನಮೂದಾಗಿರಲಿಲ್ಲ. ನಾನು ಅನುಭವಿಸುತ್ತಿದ್ದ ಗೌರವ ಈ ಹಿನ್ನೆಲೆಯಲ್ಲಿ ವಿಚಿತ್ರವೆನಿಸಿತು. ಒಬ್ಬ ಶಿಕ್ಷಕಿ ಈ ಕಗ್ಗಂಟು ಬಿಡಿಸಿದರು. 'ಮೇಡಂ, ನಿಮ್ಮ ಮಗಳು ವಿಷಯವನ್ನು ಹೀರಿಕೊಳ್ಳುವುದರಲ್ಲಿ ತುಂಬ ಮುಂದಿದ್ದಾಳೆ. ಆದರೆ, ಪರೀಕ್ಷೆಯಲ್ಲಿ ಉತ್ತರ ಬರೆಯುವಾಗ ಅವಳಲ್ಲಿ ಸ್ಪರ್ಧಾತ್ಮಕ ಗುಣ ಇಲ್ಲದ ಕಾರಣ, ಅಂಕಗಳು ಕಡಿಮೆಯಾಗುತ್ತವೆ. ತರಗತಿಯಲ್ಲಿ ನಾವು ಪಾಠ ಮಾಡುವಾಗ, ನಮಗೆ ವಿಷಯಕ್ಕೆ ಸಂಬಂಧಿಸಿದ, ಬೇರೆ ಬೇರೆ ವಿಚಾರಗಳನ್ನು ಹೇಳುತ್ತಾಳೆ. ಬಹುಶಃ ಅವಳ ಪಠ್ಯೇತರ ಓದುವ ಹಂಬಲ ಅವಳಲ್ಲಿ ವಿಷಯ ಜ್ಞಾನ ಚೆನ್ನಾಗಿ ತುಂಬಿದೆ. ದಯವಿಟ್ಟು ಈ ಅಂಕಗಳ ಕಾರಣಕ್ಕೆ, ಅವಳನ್ನು ಬೈಯಬೇಡಿ.' ಅಂದೇ ನನಗೆ ಆ ಕ್ಷಣವೇ ಜ್ಞಾನೋದಯವಾಗಿ, ಇಂದಿಗೂ ಸಿ. ಎ ಪರೀಕ್ಷೆಗೆ ತಯಾರಿ ನಡೆಸಿರುವ ಅವಳನ್ನು ದೂಷಿಸಲು ಮನ ಬರುವುದಿಲ್ಲ. ಪಿ.ಯು.ಸಿಯ ಹಂತದಿಂದ ಅವಳು ಉತ್ತಮವಾಗಿ ತೇರ್ಗಡೆ ಹೊಂದುತ್ತಿದ್ದಾಳೆ.

ಇಂದಿನ ಕಾಲದ ಪೋಷಕರನ್ನು, ಮಕ್ಕಳ ಭವಿಷ್ಯದ ಬಗ್ಗೆ ಅವರು ಹೊಂದಿರುವ ಭಯಭೀತಿಯನ್ನು ಗಮನಿಸುವಾಗ ನಗು ಬರುತ್ತದೆ. ಕಸಿನ್ ಜ್ಯೋತಿಗೆ ಇಬ್ಬರು ಪುತ್ರಿಯರು. ವರ್ಷಕ್ಕೆ ಒಂದೊಂದು ಮಗುವಿಗೆ ಕನಿಷ್ಠ ಒಂದು ಲಕ್ಷ ರೂಪಾಯಿ, ವಿದ್ಯಾಭ್ಯಾಸಕ್ಕಾಗಿ ತೆಗೆದಿಡಬೇಕು. ಅವಳು ಒಂದು ಉಪಾಯ ಹುಡುಕಿದ್ದಾಳೆ. 'ತುಂಬ ಸಿಂಪಲ್. ಹೇಗಿದ್ದರೂ ಇಬ್ಬರಿಗೂ ಕೂಡೋದು, ಕಳೆಯೋದು ಸುಮಾರಾಗಿ ಬರತ್ತೆ. ಅಷ್ಟು ಸಾಕು. ಸ್ಕೂಲು ಬಿಟ್ಟರೂ ಪರ್ವಾಗಿಲ್ಲ. ಎಸ್.ಎಸ್.ಎಲ್.ಸಿ ಖಾಸಗಿಯಾಗಿ ಕಟ್ಟಿಸಿ ಪಾಸ್ ಮಾಡಿಸಿದರೆ ಸಾಕು. ಹಾಡು, ಹಸೆ ಯಾವುದರಲ್ಲಿ ಆಸಕ್ತಿ ಇದೆಯೋ ಮುಂದುವರೆಸಿದರೆ ಆಯಿತು. ಕಲಿತ ಮೇಲೆ ಅವೇ ಪಾಠ,